## ಕರ್ನಾಟಕ ವಿಧಾನ ಪರಿಷತ್

| | |
|---|---|
| ಮಾನ್ಯ ಸದಸ್ಯರ ಹೆಸರು | : ಶ್ರೀ ಸುನೀಲ್ ವಲ್ಯಾಪುರ್ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : **1214** |
| ಉತ್ತರಿಸಬೇಕಾದ ದಿನಾಂಕ | : 17.12.2025 |
| ಉತ್ತರಿಸಬೇಕಾದ ಸಚಿವರು | : ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2019-20ನೇ ಸಾಲಿನಿಂದ ಇಲ್ಲಿಯವರೆಗೆ ಕಲಬುರಗಿ ಜಿಲ್ಲೆಗೆ ವಸತಿ ಇಲಾಖೆಯ ವಿವಿಧ ಯೋಜನೆಗಳ ಮುಖಾಂತರ ಮಂಜೂರಾಗಿರುವ ಮನೆಗಳ ಸಂಖ್ಯೆ ಎಷ್ಟು; ನಿರ್ಮಾಣ ಮಾಡಿರುವ ಮನೆಗಳು ಎಷ್ಟು; | **ರಾಜೀವ್ ಗಾಂಧಿ ವಸತಿ ನಿಗಮ**<br>**2019-20**ನೇ ಸಾಲಿನಿಂದ ಇಲ್ಲಿಯವರೆಗೆ ಕಲಬುರಗಿ ಜಿಲ್ಲೆಗೆ ವಿವಿಧ ಯೋಜನೆಗಳಡಿ ಒಟ್ಟು **71,163** ಮನೆಗಳು ಮಂಜೂರಾಗಿದ್ದು, ಈ ಪೈಕಿ **13,765** ಮನೆಗಳು ಪೂರ್ಣಗೊಂಡಿದ್ದು, **13,273** ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿದ್ದು, **41,526** ಮನೆಗಳನ್ನು ಪ್ರಾರಂಭವಾಗಬೇಕಿರುತ್ತವೆ. ಇನ್ನೂಳಿದಂತೆ **2,599** ವಿವಿಧ ಕಾರಣಗಳಿಂದ ತಾತ್ಕಾಲಿಕವಾಗಿ ತಡೆಹಿಡಿಯಲಾಗಿರುತ್ತವೆ.<br>**ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ**<br>2019-20ನೇ ಸಾಲಿನಿಂದ ಇಲ್ಲಿಯವರೆಗೆ ಕಲಬುರಗಿ ಜಿಲ್ಲೆಗೆ ಯಾವುದೇ ಯೋಜನೆಯಡಿ ಹೊಸದಾಗಿ ಮನೆಗಳು ಮಂಜೂರಾಗಿರುವುದಿಲ್ಲ. |
| ಆ) | ಪ್ರತಿ ಮನೆಗೆ ತಗಲುವ ಒಟ್ಟು ವೆಚ್ಚ ಎಷ್ಟು; ಅದರಲ್ಲಿ ಫಲಾನುಭವಿಗೆ ಸಿಗುವ ಸಹಾಯಧನ ಎಷ್ಟು; ಹಾಗೂ 2019-20 ರಿಂದ ಇಲ್ಲಿಯವರೆಗೆ ವಸತಿ ಯೋಜನೆಯ ಮನೆಗಳಿಗೆ ನಿಗದಿಪಡಿಸಿರುವ ಮೊತ್ತ ಎಷ್ಟು ಬಾರಿ ಪರಿಷ್ಕರಣೆಯಾಗಿದೆ; | **ರಾಜೀವ್ ಗಾಂಧಿ ವಸತಿ ನಿಗಮ**<br>ಪ್ರಸ್ತುತ ವಿವಿಧ ವಸತಿ ಯೋಜನೆಗಳಡಿ ಪ್ರತಿ ಮನೆ(ಫಲಾನುಭವಿ)ಗೆ ಪಾವತಿಸಲಾಗುತ್ತಿರುವ ಸಹಾಯಧನದ ವಿವರ ಈ ಕೆಳಗಿನಂತಿದೆ: |

| ಯೋಜನೆ | ಒಟ್ಟು | | ರಾಜ್ಯದ ಪಾಲು | | ಕೇಂದ್ರದ ಪಾಲು | |
|---|---|---|---|---|---|---|
| | ಸಾಮಾನ್ಯ | ಪ.ಜಾ/ ಪ.ಪಂಗಡ | ಸಾಮಾನ್ಯ | ಪ.ಜಾ/ ಪ.ಪಂಗಡ | ಸಾಮಾನ್ಯ | ಪ.ಜಾ/ ಪ.ಪಂಗಡ |
| ಬಸವ ವಸತಿ | 1.20 | - | 1.20 | - | - | - |
| ಡಾ.ಬಿ. ಆರ್ ಅಂಬೇಡ್ಕರ್ ನಿವಾಸ್ (ಗ್ರಾಮೀಣ) | - | 2.00 | - | 2.00 | - | - |
| ದೇವರಾಜು ಅರಸು ವಸತಿ (ಗ್ರಾಮೀಣ & ನಗರ) | 1.20 | 1.50 | 1.20 | 1.50 | - | - |
| ಪ್ರಧಾನ ಮಂತ್ರಿ ಆವಾಸ್ - ಗ್ರಾಮೀಣ | 1.20 | 1.75 | 0.48 | 1.03 | 0.72 | 0.72 |
| ಪ್ರಧಾನ ಮಂತ್ರಿ ಆವಾಸ್ - ನಗರ | | | - | - | 1.50 | 1.50 |
| ವಾಜಪೇಯಿ ನಗರ ವಸತಿ | 2.70 | 3.50 | 1.20 | - | - | - |
| ಡಾ.ಬಿ. ಆರ್ ಅಂಬೇಡ್ಕರ್ ನಿವಾಸ್ (ನಗರ) | | | - | 2.00 | - | - |

ಪ್ರಧಾನ ಮಂತ್ರಿ ಆವಾಸ್ ನಗರ ವಸತಿ ಯೋಜನೆಯನ್ನು ರಾಜ್ಯ ಸರ್ಕಾರದ ಯೋಜನೆಗಳಾದ ಡಾ|| ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ – ನಗರ ಹಾಗೂ ವಾಜಪೇಯಿ ನಗರ ವಸತಿ ಯೋಜನೆಗಳೊಂದಿಗೆ ಸಂಯೋಜನೆಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿದ್ದು, ಕೇಂದ್ರದ ಅನುದಾನ ಸೇರಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ರೂ.3.50ಲಕ್ಷ ಹಾಗೂ ಇತರ

ವರ್ಗದವರಿಗೆ ರೂ.2.70 ಲಕ್ಷಗಳನ್ನು ನೀಡಲಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ:ಸಕಇ 401 ಎಸ್‌ಡಿಸಿ 2022, ದಿನಾಂಕ:16.05.2025ರಲ್ಲಿ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಕಇ 61 ಎಸ್‌ಟಿಸಿ 2022, ದಿನಾಂಕ:03.08.2022ರಲ್ಲಿ ಡಾ||ಬಿ. ಆರ್ ಅಂಬೇಡ್ಕರ್ ನಿವಾಸ್ ಯೋಜನೆಯಡಿ ದಿನಾಂಕ: 01.04.2022ರಿಂದ ಅನ್ವಯಿಸುವಂತೆ ಹೊಸದಾಗಿ ಮಂಜೂರು ಮಾಡುವ ವಸತಿ ನಿರ್ಮಾಣಕ್ಕೆ ಪಾವತಿಸಲಾಗುತ್ತಿರುವ ಸಹಾಯಧನ ರೂ.1.75 ಲಕ್ಷದಿಂದ ರೂ. 2.00 ಲಕ್ಷಕ್ಕೆ ಹೆಚ್ಚಿಸಿ ಆದೇಶಿಸಲಾಗಿರುತ್ತದೆ. ಸದರಿ ಯೋಜನೆಯನ್ನು ಹೊರುತುಪಡಿಸಿ ಇತರೆ ವಸತಿ ಯೋಜನೆಗಳಡಿ ಪಾವತಿಸಲಾಗುತ್ತಿರುವ ಸಹಾಯಧನದ ಮೊತ್ತವನ್ನು ಪರಿಷ್ಕರಣೆಯಾಗಿರುವುದಿಲ್ಲ.

**ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ**

- ಕೊಳಗೇರಿ ಅಭಿವೃದ್ಧಿ ಮಂಡಳಿಯಲ್ಲಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯನ್ನು ರಾಜ್ಯ ಸರ್ಕಾರದ ವಸತಿ ಯೋಜನೆಗಳಾದ ಡಾ|| ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯನ್ನು ಸಂಯೋಜನೆಗೊಳಿಸಿ ರಾಜ್ಯಾದ್ಯಂತ ನಗರ /ಪಟ್ಟಣ ವ್ಯಾಪ್ತಿಯಲ್ಲಿನ ಕೊಳಗೇರಿ ಪ್ರದೇಶಗಳಲ್ಲಿ ಒಟ್ಟು 180253(AHP) ಮನೆಗಳ ನಿರ್ಮಾಣಕ್ಕೆ 2025-16ನೇ ಸಾಲಿನಿಂದ 2018-19ನೇ ಸಾಲಿನ ವರೆಗೆ ವಿವಿಧ ಹಂತಗಳಲ್ಲಿ ಮಂಜೂರಾತಿ ದೊರೆತ್ತಿರುತ್ತದೆ.
- ಸದರಿ ಮನೆಗಳ ಘಟಕ ವೆಚ್ಚ ಸರಾಸರಿ ರೂ.6.74 ಕ್ಷಗಳಾಗಿದ್ದು (GST ಒಳಗೊಂಡಂತೆ), ಕೇಂದ್ರ ಸರ್ಕಾರದ ರೂ.1.50 ಲಕ್ಷಗಳು ಮತ್ತು ರಾಜ್ಯ ಸರ್ಕಾರದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗಕ್ಕೆ ರೂ.2.00ಲಕ್ಷಗಳುಹಾಗೂ ಇತರೇ ವರ್ಗಕ್ಕೆ ರೂ.1.20 ಲಕ್ಷಗಳು ಮತ್ತು ಫಲಾನುಭವಿಗಳ ವಂತಿಕೆ (ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡ ವರ್ಗಕ್ಕೆ ಶೇ. 10% ರಷ್ಟು ಮತ್ತು ಸಾಮಾನ್ಯ ವರ್ಗಕ್ಕೆ 15% ರಷ್ಟು) ಮೊತ್ತವನ್ನು ಹೊರತುಪಡಿಸಿ, ಬಾಕಿ ಉಳಿದ ಮೊತ್ತಕ್ಕೆ ಬ್ಯಾಂಕ್ ಗಳಿಂದ ಫಲಾನುಭವಿಗಳ ಹೆಸರಿನಲ್ಲಿ ಸಾಲಸೌಲಭ್ಯ ಒದಗಿಸಿ ಮನೆಗಳ ನಿರ್ಮಾಣವನ್ನು ಪೂರ್ಣಗೊಳಿಸಬೇಕಾಗಿತ್ತು. ಆದರಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಫಲಾನುಭವಿಗಳು ಸರಾಸರಿ ರೂ.2.56 ಲಕ್ಷಗಳು ಹಾಗೂ ಇತರೆ ವರ್ಗದ ಫಲಾನುಭವಿಗಳು ರೂ.3.02 ಲಕ್ಷಗಳನ್ನು ಪಾವತಿಸಬೇಕಾಗಿರುತ್ತದೆ.
- ಇದನ್ನು ಮನಗಂಡ ಸರ್ಕಾರವು ಸರ್ಕಾರದ ಆದೇಶ ಸಂಖ್ಯೆ: ವಇ 148 ಹೆಚ್‌ಎಫ್ 2023, ದಿನಾಂಕ: 30.12.2023 ರನ್ವಯ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನ ಹೊರತುಪಡಿಸಿ ರೂ. 1.00 ಲಕ್ಷಗಳನ್ನು ಫಲಾನುಭವಿಗಳಿಂದ ಪಾವತಿಸಿಕೊಂಡು ಉಳಿದ ಫಲಾನುಭವಿ ವಂತಿಕೆ ಮೊತ್ತವನ್ನನು ರಾಜ್ಯ ಸರ್ಕಾರದಿಂದ ಭರಿಸಲು ಆದೇಶವಾಗಿರುತ್ತದೆಅದರಂತೆ ಮನೆಗಳ ಘಟಕ ವೆಚ್ಚದ ವಿವರಗಳು ಈ ಕೆಳಕಂಡಂತಿವೆ.

**ರೂ.ಲಕ್ಷಗಳಲ್ಲಿ**

| ಮನೆಗಳ ಘಟಕ ವೆಚ್ಚ | ಕೇಂದ್ರ ಸರ್ಕಾರದ ಸಹಾಯಧನ | ರಾಜ್ಯ ಸರ್ಕಾರದ ಸಹಾಯಧನ | | ಫಲಾಭವಿ ವಂತಿಕೆ | |
|---|---|---|---|---|---|
| | | ಪರಿಶಿಷ್ಟ ಜಾತಿ/ಪಂಗಡ | ಇತರೇ ವರ್ಗ | ಫಲಾನುಭವಿಗಳು ಭರಿಸಬೇಕಾದ ಮೊತ್ತ | ರಾಜ್ಯ ಸರ್ಕಾರ |

| | | | | | | |
|---|---|---|---|---|---|---|
| 6.74 | 1.50 | 2.00 | 1.20 | 1.00 | 2.24 (SC/ST) |
| | | | | | 3.04 (Others) |

ಇ) ಇಲ್ಲಿಯವರೆಗೂ ಮಂಜೂರಾಗಿರುವ ಮನೆಗಳನ್ನು ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

**ರಾಜೀವ್ ಗಾಂಧಿ ವಸತಿ ನಿಗಮ**

ಸರ್ಕಾರದ ಮನೆ ಮಾರ್ಗಸೂಚಿಯನ್ವಯ ಕಾಮಗಾರಿ ಆದೇಶ ನೀಡಿದ 90 ದಿನಗಳೊಳಗಾಗಿ ಫಲಾನುಭವಿಯು ಮನೆಯ ಕಾಮಗಾರಿಯನ್ನು ಪ್ರಾರಂಭಿಸಬೇಕಿದ್ದು, ಒಂದು ವರ್ಷದೊಳಗಾಗಿ ಮನೆಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಮನೆಗಳ ನಿರ್ಮಾಣವನ್ನು ಫಲಾನುಭವಿಗಳೇ ಸ್ವತಃ ನಿರ್ಮಿಸಿಕೊಳ್ಳುತ್ತಿದ್ದು, ನಿರ್ಮಾಣ ಹಂತದಲ್ಲಿರುವ ಮನೆಗಳ ಫಲಾನುಭವಿಗಳಿಗೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ನಗರ ಸ್ಥಳೀಯ ಅಧಿಕಾರಿಗಳ ಮುಖಾಂತರ ತಿಳುವಳಿಕೆ ಪತ್ರಗಳನ್ನು ನೀಡಿ ಹಾಗೂ ನೋಟೀಸ್ ಜಾರಿ ಮಾಡಿ ಫಲಾನುಭವಿಗಳ ಮನ ಒಲಿಸಿ ಶೀಘ್ರವಾಗಿ ಮನೆಗಳನ್ನು ನಿರ್ಮಿಸಿಕೊಳ್ಳಲು ಕ್ರಮವಹಿಸಲಾಗುತ್ತಿದೆ.

ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳೊಂದಿಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಮನೆಗಳ ಪ್ರಗತಿ ಪರಿಶೀಲಿಸಲಾಗುತ್ತಿದೆ ಹಾಗೂ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರಿಗೆ ಅರೆ ಸರ್ಕಾರಿ ಪತ್ರ ಬರೆದು ವಿವಿಧ ಹಂತದ ಪ್ರಗತಿಯಲ್ಲಿರುವ ಮನೆಗಳನ್ನು ಪೂರ್ಣಗೊಳಿಸಲು ಕ್ರಮ ವಹಿಸುವಂತೆ ಸೂಚಿಸಲಾಗುತ್ತಿದೆ. ಇದಲ್ಲದೇ ನಿಗಮದ ಅಧಿಕಾರಿಗಳನ್ನೊಳಗೊಂಡ ತಂಡಗಳನ್ನು ವಿಭಾಗವಾರು ರಚಿಸಿ, ಜಿಲ್ಲೆಗಳಿಗೆ ಭೇಟಿ ನೀಡಿ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಲಾಗುತ್ತಿದೆ.

ಒಟ್ಟಾರೆಯಾಗಿ ಪ್ರಗತಿ ಸಾಧಿಸಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

**ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ**

ಮಂಡಳಿಗೆ 2017-18 & 2018-2019ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆಗೆ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಅವಾಸ್ ವಸತಿ ಯೋಜನೆಯಡಿ ರಾಜ್ಯ ಸರ್ಕಾರದ ಯೋಜನೆಯಾದ ಡಾ|| ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ ಹಾಗೂ ವಾಜಪೇಯಿ ನಗರ ವಸತಿ ಯೋಜನೆಯನ್ನು ಸಂಯೋಜನೆಗೊಳಿಸಿ ವಿವಿಧ ಹಂತಗಳಲ್ಲಿ ಒಟ್ಟು 12516 ಮನೆಗಳು ಮಂಜೂರಾಗಿದ್ದು ಪೂರ್ಣಗೊಂಡ ಮನೆಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ | ನಗರ / ತಾಲ್ಲೂಕ | ಮಂಜೂರಾದ ಮನೆಗಳ ಸಂಖ್ಯೆ | ಪ್ರಗತಿಯಲ್ಲಿರುವ ಮನೆಗಳ ಸಂಖ್ಯೆ | ಪೂರ್ಣಗೊಂಡಿರುವ ಮನೆಗಳ ಸಂಖ್ಯೆ | ಹಂಚಿಕೆ ಮಾಡಲಾದ ಮನೆಗಳ ಸಂಖ್ಯೆ | ಹಂಚಿಕೆ ಮಾಡಲು ಉದ್ದೇಶಿಸಿರುವ ಮನೆಗಳ ಸಂಖ್ಯೆ | ಪ್ರಾರಂಭಿಸಬೇಕಾಗಿರುವ ಮನೆಗಳ ಸಂಖ್ಯೆ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | ಕಲಬುರಗಿ | 3429 | 619 | 1587 | 454 | 800 | 1223 |
| 2 | ಶಹಾಬಾದ | 1723 | 1130 | 100 | 0 | 1000000000 | 493 |
| 4 | ಆಳಂದ | 1564 | 74 | 428 | 145 | 205 | 1062 |
| 5 | ಅಫಜಲಪೂರರ | 250 | 0 | 250 | 175 | 75 | 0 |

| | | | | | | |
|---|---|---|---|---|---|---|
| 6 | ಚಿತ್ತಾಪೂರ | 1000 | 0 | 1000 | 1000 | 0 | 0 |
| 7 | ಜೇವರ್ಗಿ | 1150 | 389 | 744 | 173 | 425 | 17 |
| 8 | ಸೇಡಂ | 1150 | 840 | 310 | 158 | 150 | 0 |
| 9 | ಚಿಂಚೋಳಿ | 1513 | 636 | 550 | 165 | 300 | 327 |
| 10 | ಕಾಳಗಿ | 737 | 340 | 210 | 0 | 210 | 187 |

- ಸರ್ಕಾರದ ಆದೇಶ ಸಂಖ್ಯೆ ವಇ 148 ಹೆಚ್ಎಫ್ಎ 2023, ದಿನಾಂಕ:30.12.2023 ರಲ್ಲಿ ಸದರಿ ಮನೆಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನ ಹೊರತುಪಡಿಸಿ ಫಲಾನುಭವಿ ವಂತಿಕೆಯನ್ನು ಗರಿಷ್ಟ ರೂ. 1.00 ಲಕ್ಷಗಳನ್ನು ಸಂಗ್ರಹಿಸಿ ಉಳಿದ ಫಲಾನುಭವಿ ವಂತಿಕೆ ಮೊತ್ತವನ್ನು ಸರ್ಕಾರದಿಂದ ಭರಿಸಲು ಆದೇಶವಾಗಿರುತ್ತದೆ.
- ಅದರಂತೆ ಫಲಾನುಭವಿಗಳಿಂದ ರೂ.1.00 ಲಕ್ಷಗಳ ಫಲಾನುಭವಿ ವಂತಿಕೆ ಪಾವತಿಸಿಕೊಂಡು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನಕ್ಕೆ ಅನುಗುಣವಾಗಿ ಮನೆಗಳನ್ನು ಪೂರ್ಣಗೊಳಿಸಿ ಹಂಚಿಕೆಗೆ ಕ್ರಮ ವಹಿಸಲಾಗುತ್ತಿದೆ.
- ಕಲಬುರಗಿ ಜಿಲ್ಲೆಗೆ ಮಂಜೂರಾದ ಯೋಜನೆಗಳಲ್ಲಿ ಕಲಂ 8 ರಲ್ಲಿ ತೋರಿಸಿರುವಂತೆ ಪ್ರಾರಂಬಿಸಬೇಕಾದ ಮನೆಗಳನ್ನು ಸರ್ಕಾರದ ಆದೇಶ ದಿನಾಂಕ:17.04.2025ರಲ್ಲಿ ಪ್ರಾರಂಭಿಸಲು ಅನುಮೋದನೆ ನೀಡಿದ್ದು, ಕೇಂದ್ರ ಸರ್ಕಾರವು ಸದರಿ ಯೋಜನೆಯ ಅನುಷ್ಠಾನ ಅವಧಿಯು 2025 ಡಿಸೆಂಬರ್ ಅಂತ್ಯಕ್ಕೆ ಪೂರ್ಣಗೊಳ್ಳುತ್ತಿರುವ ಹಿನ್ನಲೆಯಲ್ಲಿ ಕೇಂದ್ರದ ಸಹಾಯ ಧನವನ್ನು ನೀಡಲು ಸಾಧ್ಯವಾಗದ ಬಗ್ಗೆ ತಿಳಿಸಿರುತ್ತಾರೆ.

ಆದ್ದರಿಂದ ಪ್ರಸ್ತುತ ಪ್ರಗತಿಯಲ್ಲಿರುವ ಮನೆಗಳ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ.

ಈ) ಕಲಬುರಗಿ ನಗರದಲ್ಲಿರುವ ವಿವಿಧ ಕೊಳಚೆ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಮಂಡಳಿಗೆ 2017-18 & 2018-2019ನೇ ಸಾಲಿನಲ್ಲಿ ಕಲಬುರಗಿ ನಗರಕ್ಕೆ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಅವಾಸ್ ವಸತಿ ಯೋಜನೆಯಡಿ ರಾಜ್ಯ ಸರ್ಕಾರದ ಯೋಜನೆಯಾದ ಡಾ|| ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ ಹಾಗೂ ವಾಜಪೇಯಿ ಯೋಜನೆಯನ್ನು ಸಂಯೋಜನೆಗೊಳಿಸಿ ವಿವಿಧ ಹಂತಗಳಲ್ಲಿ ಒಟ್ಟು 3429 ಮನೆಗಳು ಮಂಜೂರಾಗಿದ್ದು ಪೂರ್ಣಗೊಂಡ ಮನೆಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರ ಸಂ | ನಗರ | ಮಂಜೂರಾದ ಮನೆಗಳ ಸಂಖ್ಯೆ | ಪ್ರಗತಿಯಲ್ಲಿರುವ ಮನೆಗಳ ಸಂಖ್ಯೆ | ಪೂರ್ಣಗೊಂಡಿರುವ ಮನೆಗಳ ಸಂಖ್ಯೆ | ಹಂಚಿಕೆ ಮಾಡಲಾದ ಮನೆಗಳ ಸಂಖ್ಯೆ | ಹಂಚಿಕೆ ಮಾಡಲು ಉದ್ದೇಶಿಸಿರುವ ಮನೆಗಳ ಸಂಖ್ಯೆ | ಪ್ರಾರಂಭಿಸ ಬೇಕಾಗಿರುವ ಮನೆಗಳ ಸಂಖ್ಯೆ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | ಕಲಬುರಗಿ | 500 | 46 | 454 | 454 | 0 | 0 |
| 2 | | 1482 | 433 | 585 | 0 | 400 | 429 |
| 3 | | 1447 | 410 | 548 | 0 | 400 | 794 |

- ಸರ್ಕಾರದ ಆದೇಶ ಸಂಖ್ಯೆ ವಇ 148 ಹೆಚ್ಎಫ್ಎ 2023

| | | |
|---|---|---|
| | | ದಿನಾಂಕ: 30.12.2023 ರಲ್ಲಿ ಸದರಿ ಮನೆಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನ ಹೊರತುಪಡಿಸಿ ಫಲಾನುಭವಿ ವಂತಿಕೆಯನ್ನು ಗರಿಷ್ಟ ರೂ.1.00 ಲಕ್ಷಗಳನ್ನು ಸಂಗ್ರಹಿಸಿ ಉಳಿದ ಫಲಾನುಭವಿ ವಂತಿಕೆ ಮೊತ್ತವನ್ನು ಸರ್ಕಾರದಿಂದ ಭರಿಸಲು ಆದೇಶವಾಗಿರುತ್ತದೆ.<br>• ಅದರಂತೆ ಫಲಾನುಭವಿಗಳಿಂದ ರೂ.1.00 ಲಕ್ಷಗಳ ಫಲಾನುಭವಿ ವಂತಿಕೆ ಪಾವತಿಸಿಕೊಂಡು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನಕ್ಕೆ ಅನುಗುಣವಾಗಿ ಮನೆಗಳನ್ನು ಪೂರ್ಣಗೊಳಿಸಿ ಹಂಚಿಕೆಗೆ ಕ್ರಮ ವಹಿಸಲಾಗುತ್ತಿದೆ.<br>• ಕಲಬುರಗಿ ನಗರಕ್ಕೆ ಮಂಜೂರಾದ ಯೋಜನೆಗಳಲ್ಲಿ ಕಲಂ 8 ರಲ್ಲಿ ತೋರಿಸಿರುವಂತೆ ಪ್ರಾರಂಬಿಸಬೇಕಾದ ಮನೆಗಳನ್ನು ಸರ್ಕಾರದ ಆದೇಶ ದಿನಾಂಕ: 17.04.2025 ರಲ್ಲಿ ಪ್ರಾರಂಭಿಸಲು ಅನುಮೋದನೆ ನೀಡಿದ್ದು, ಕೇಂದ್ರ ಸರ್ಕಾರವು ಸದರಿ ಯೋಜನೆಯ ಅನುಷ್ಠಾನ ಅವಧಿಯು 2025 ಡಿಸೆಂಬರ್ ಅಂತ್ಯಕ್ಕೆ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರದ ಸಹಾಯ ಧನವನ್ನು ನೀಡಲು ಸಾಧ್ಯವಾಗದ ಬಗ್ಗೆ ತಿಳಿಸಿರುತ್ತಾರೆ.<br><br>ಆದ್ದರಿಂದ ಪ್ರಸ್ತುತ ಪ್ರಗತಿಯಲ್ಲಿರುವ ಮನೆಗಳ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ. |
| ಉ) | 2019-20ನೇ ಸಾಲಿನಿಂದ ಇಲ್ಲಿಯವರೆಗೆ ಕಲಬುರಗಿ ಜಿಲ್ಲೆಯ ಕೊಳಚೆ ಪ್ರದೇಶಗಳಿಗೆ ಮಂಜೂರಾಗಿರುವ ಮನೆಗಳು ಎಷ್ಟು: | 2019-20ನೇ ಸಾಲಿನಿಂದ ಇಲ್ಲಿಯವರೆಗೆ ಕಲಬುರಗಿ ಜಿಲ್ಲೆಯ ಕೊಳಚೆ ಪ್ರದೇಶಗಳಿಗೆ ಯಾವುದೇ ಮನೆಗಳು ಮಂಜೂರಾಗಿರುವುದಿಲ್ಲ. |
| ಊ) | ಕಳೆದ 2 ವರ್ಷಗಳಿಂದ ಕೊಳಚೆ ಪ್ರದೇಶಗಳ ಅಭಿವೃದ್ಧಿ ಯೋಜನೆಯಡಿ ವಿವಿಧ ಕಾಮಗಾರಿಗಳಿಗೆ ಮಂಜೂರಾಗಿರುವ ಅನುದಾನವೇಷ್ಟು? | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಕಳೆದ 2 ವರ್ಷಗಳಿಂದ ಕೊಳಚೆ ಪ್ರದೇಶಗಳ ಅಭಿವೃದ್ಧಿ ಯೋಜನೆಯಡಿ ಕಲಬುರಗಿ ಜಿಲ್ಲೆಗೆ ಯಾವುದೇ ಕಾಮಗಾರಿಗಳು ಮಂಜೂರಾಗಿರುವುದಿಲ್ಲ. |

ಸಂಖ್ಯೆ: ವಇ 532 ಹೆಚ್‌ಎಂ 2025

(ಬಿ.ಜೆಡ್. ಜಮೀರ್ ಅಹ್ಮದ್‌ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು